(SRI ALUR HANUMANTHAPPA)

(c) (i) An estimate for repairs to the waste weir amounting to Rs. 5,873 is sanctioned and the work is nearing completion.

(ii) An estimate for improvements to canals amounting to Rs. 65,420 is ready and the work will be taken up immediately after it is sanctioned and agency fixed for its execution.

ಶ್ರೀ ಎಫ್. ಎಸ್. ತಾವರೆ.—ಈ ಕಾಲುವೆಗಳು ಹೂತು ಹೋಗಿರುವುದರಿಂದ ತೊಂದರೆಯಾಗಿ, 637 ಎಕರೆ ಜಮೀನಿನಲ್ಲಿ ನೀರು ನಿಂತುಹೋಗಿರುವುದು ನರಕಾರದ ಗಮನಕ್ಕೆ ಬಂದಿದೆಯೇ?

† ಶ್ರೀ ಆಲೂರು ಹನುಮಂತಪ್ಪ.—ಹೂಳಿನಿಂದ ಕಾಲುವೆಗಳು ಬ್ರೀಚ್ ಆಗಿವೆ. 65,420 ರೂಪಾಯಿಗಳ ಎಸ್ಟಿಮೇಟು ತಯಾರಾಗಿ ಕಾರ್ಯರೂಪಕ್ಕೆ ಬರುತ್ತಾ ಇದೆ.

ಶ್ರೀ ಎಫ್. ಎಸ್. ತಾವರೆ.—ರಿಪೇರಿ ಕೆಲಸ ಮುಗಿಯುವುದರಲ್ಲಿದೆ ಎಂದು ಹೇಳಿದ್ದೀರಿ, ಆ ರಿಪೇರಿ ಕೆಲಸ ಎಂದು ಪ್ರಾರಂಭವಾಯಿತು?

ಶ್ರೀ ಆಲೂರು ಹನುಮಂತಪ್ಪ.—ವೇಸ್ಟ್‌ವೇರ್ ಲೀಕ್ ಆಗುತ್ತಿತ್ತು. ಅದಕ್ಕೆ ಎಸ್ಟಿಮೇಟು ರೂ. 5,873 ಆಗಿ, ಆ ಕೆಲಸ ಈ ತಿಂಗಳ ಕೊನೆಯಲ್ಲಿ ಮುಗಿಯುತ್ತದೆ.

ಶ್ರೀ ಎಫ್. ಎಸ್. ತಾವರೆ.—ಯಾವುದೂ ಕೆಲಸ ನಡೆದಿಲ್ಲ, ನಾನು ಹೇಳಿದ್ದನ್ನು ಪರೀಕ್ಷೆ ಮಾಡಿಸುತ್ತೀರ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ. 5,800 ರೂಪಾಯಿನ ಕೆಲಸ ಈ ತಿಂಗಳ ಕೊನೆಯಲ್ಲಿ ಮುಗಿಯುತ್ತದೆಂದು ಸರ್ಕಾರದ ಮುಂದೆ ವರದಿ ಬಂದಿದೆ.

ಶ್ರೀ ಎಫ್. ಎಸ್. ತಾವರೆ.—ಇವತ್ತಿನವರೆಗೆ ಕೆಲಸ ನಡೆದಿಲ್ಲ. ಇದರ ಬಗ್ಗೆ ತಪಾಸು ಮಾಡುತ್ತೀರ?

ಶ್ರೀ ಆಲೂರು ಹನುಮಂತಪ್ಪ.—ಅದು ಹಾಗಿದ್ದರೆ ಪರಿಶೀಲನೆ ಮಾಡಿನುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೆಲಸ ಮುಗಿಯುವುದರೊಳಗೆ ಇದೆ ಎಂದು ಮಾನ್ಯ ಉಪ ಮಂತ್ರಿಗಳು ಹೇಳುತ್ತಿದ್ದಾರೆ, ಮಾನ್ಯ ಸದಸ್ಯರು ಕೆಲಸ ಮುಗಿದಿಲ್ಲ ಎಂದು ಹೇಳುತ್ತಾರೆ. ಇಂಥ ಸಂದರ್ಭ ಬಂದರೆ ಏನುಮಾಡಬೇಕು?

Mr. SPEAKER.—He says that he will examine it.

———

Jodi, Inam and Khayamgutta villages in Kunigal Taluk

*Q.—753. Sri N. HUCHMASTHY GOWDA (Chandrasekharapura).—

Will the Government be pleased to state :—

(a) the number of Jodi, Inam and Khayamgutta Villages in Kunigal Taluk;

(b) out of them, the number of villages taken over by Government;

(c) the number of villages in respect of which enquiries have already been conducted in accordance with Inam Abolition Rules and necessary changes have been made in the Index of Land and Patta, etc ?

A.—Sri M. V. KRISHNAPPA (Minister for Revenue).—

(a) 38.
(b) 38.
(c) 23.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಉಳಿದ ಗ್ರಾಮಗಳನ್ನು ಸರ್ವೆ ಮಾಡುವುದಕ್ಕೆ ಏನೇನು ಕ್ರಮ ತೆಗೆದುಕೊಂಡಿದ್ದೀರ? ಸಿಬ್ಬಂದಿ ನೇಮಿಸಿಕೊಂಡಿದ್ದೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು; ಸಂಬಂಧಪಟ್ಟ ತಹಸೀಲುದಾರರು ಎನ್‌ಕ್ವೈರಿ ಮುಗಿಸಿದ್ದಾರೆ. ಎರಡು ಗ್ರಾಮಗಳ ಬಗ್ಗೆ ಮಾತ್ರ ಉಳಿದಿದೆ—ಅವುಗಳಲ್ಲಿ ಒಂದನ್ನು ಮುನ್‌ಸಿಫ್ ಕೋರ್ಟಿನಲ್ಲಿಯೂ, ಇನ್ನೊಂದು ಡಿ. ಸಿ. ಯವರೂ, ಎನ್‌ಕ್ವೈರಿ ಮಾಡುತ್ತಾ ಇದ್ದಾರೆ. ಉಳಿದ ಗ್ರಾಮಗಳಲ್ಲಿ ಸರ್ವೆ ಕಾರ್ಯ ಮುಗಿದುಹೋಗಿದೆ; ಪಟ್ಟ ಕೊಡುವುದರಲ್ಲಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ಗ್ರಾಮಗಳಲ್ಲಿ ಹಿಂದೆ ಆಗಿದ್ದ ಪ್ರಿಲಿಮಿನರಿ ಸರ್ವೆಗೆ ಸಂಬಂಧಪಟ್ಟಂಥ ರಿಜಿಸ್ಟರುಗಳನ್ನು ಒದಗಿಸಿ ಕೊಡದೆ ಇರುವುದರಿಂದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ತೊಂದರೆಯಾಗಿದೆ. ಅದನ್ನು ಒದಗಿಸಿಕೊಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದೆರಡು ಕೇಸುಗಳಲ್ಲಿ ನಡೆದಿದೆ. ಸರ್ಕಾರದವರು ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು, ಕಾಪಿಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ.

ಶ್ರೀ ಜಿ. ಮಾದೇಗೌಡ.—ಇನಾಂ ಗ್ರಾಮಗಳಲ್ಲಿ ಪಕ್ಕ ಪೋಡಿ ಆಗದೆಯೇ ಜಮೀನುಗಳು ಲ್ಯಾಂಡ್ ಇಂಡೆಕ್ಸು ಮತ್ತು ರಿಕಾರ್ಡ್ ಆಫ್ ಫ್ಲೈಲ್ಸ್ ರಿಜಿಸ್ಟರುಗಳಲ್ಲಿ ಎಂಟರ್ ಆಗದೇ ಇರುವುದರಿಂದ, ಗ್ರಾಮಗಳ ರೈತರಿಗೆ ಸರ್ಕಾರದಿಂದ ಬರಬೇಕಾದಂಥ ಸಾಲ, ವಗೈರೆ ಸೌಲಭ್ಯಗಳು ದೊರಕದೆ ತೊಂದರೆಯಾಗಿರುವುದರಿಂದ, ಸರ್ವೆ ಆಗದಿದ್ದರೂ ತಾತ್ಕಾಲಿಕವಾದ ಕಾನೂನನ್ನು ಕೂಡಲೆ ಮಾಡಿ, ರೈತರು ಸರ್ಕಾರದಿಂದ ಸಿಕ್ಕುವಂಥ ಸೌಲಭ್ಯಗಳನ್ನು ಪಡೆಯುವಂಥ ಕ್ರಮವನ್ನು ತೆಗೆದುಕೊಳ್ಳುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನಾಂ ಗ್ರಾಮಗಳಲ್ಲಿ ಮತ್ತು ಖಾಯಂಗುತ್ತ ಜೋಡಿ ಗ್ರಾಮಗಳಲ್ಲಿ, ಜೋಡಿದಾರರ ಹೆಸರಿನಲ್ಲಿ ಪಟ್ಟಾ ಇರುತ್ತದೆ; ಪಟ್ಟಾ ಮಾಡದೆ ಇರುವ ರೈತರಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ಇನಾಂ ಅಬಾಲಿಷ್ಟ್ ಡಿ. ಸಿ. ಯವರು ಇದನ್ನು ಆದಷ್ಟು ಬೇಗ ಮುಗಿಸುತ್ತಿದ್ದಾರೆ. ಅವರು ಕೇಳಿರುವುದು ಒಂದು ತಾಲ್ಲೂಕಿನ ವಿಷಯ ಕುಣಿಗಲ್ ತಾಲ್ಲೂಕಿನಲ್ಲಿ 38 ಗ್ರಾಮಗಳಲ್ಲಿ, 27 ಗ್ರಾಮಗಳಲ್ಲಿ ಪಟ್ಟಾ ಕೊಟ್ಟುಬಿಟ್ಟರೆ, ಇನ್ನುಳಿದ 7 ಗ್ರಾಮಗಳಲ್ಲಿ ಸರ್ವೆ ಆಗಿ ಪಟ್ಟಾ ಕೊಡುವುದರಲ್ಲಿದ್ದಾರೆ. ಇನ್ನು 5-6 ತಿಂಗಳುಗಳಲ್ಲಿ ಕೆಲಸ ಮುಗಿಯುವುದು ಎಲ್ಲಾ ಹಳ್ಳಿಗಳಲ್ಲಿಯೂ, ಇನಾಂ ಮತ್ತು ಗುತ್ತಾ ಜಮೀನುಗಳನ್ನು ಹಿಡುವಳಿದಾರರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತಾ ಇದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ವೆ ಮಾಡುವುದಕ್ಕೆ ಈಗಿರುವ ಸಿಬ್ಬಂದಿಯವರು ಮ್ಯುಜೇಷನ್ ದಾಖಲೆಗಳನ್ನು ತಾಲ್ಲೂಕು ಆಫೀಸಿಗೆ ಒದಗಿಸದೆ ಇರುವುದರಿಂದ, ರೈತರೇ ತಂದುಕೊಡಬೇಕೆಂದು ರೈತರ ಮೇಲೆ ಹೊರೆ ಹಾಕಿರುವುದರಿಂದ, ಸರ್ವೆ ಆಗುವುದು ನಿಧಾನವಾಗಿದೆ. ಇದನ್ನು ಬಗೆಹರಿಸುವುದಕ್ಕೆ ಏರ್ಪಾಡು ಮಾಡುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ನನಗೆ ಗೊತ್ತಿಲ್ಲ, ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ಅದನ್ನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

ಶ್ರೀ ಜಿ. ಮಾದೇಗೌಡ.—ರಿಕಾರ್ಡ್ ಬದಲಾವಣೆಯಾಗುವುದು ಬಹಳ ನಿಧಾನವಾಗಿದೆ. ಆದಕ್ಕೊಸ್ಕರ ಅನ್‌ಸರ್ವೇಡ್ ಗ್ರಾಮಗಳಲ್ಲಿ ಸರ್ಕಾರದಿಂದ ಬರಬೇಕಾದಂಥ ಸಾಲ ಮುಂತಾದ ಸೌಲಭ್ಯಗಳು ರೈತರಿಗೆ ದೊರೆಯುವಂತೆ ತಾತ್ಕಾಲಿಕವಾಗಿ ಏನಾದರೂ ಕಾನೂನು ಮಾಡಿ, ತಕ್ಷಣ ಅವರಿಗೆ ಸಾಲ ವಗೈರೆ ಸಿಕ್ಕುವ ಹಾಗೆ ಏರ್ಪಾಡು ಮಾಡುವುದಕ್ಕೆ ಸಿದ್ಧರಿದ್ದೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಲೋನ್ ಕೊಡಬೇಕಾದರೆ ಇನಾಂ ಗ್ರಾಮಗಳವರಿಗೆ ಬೇರೆ ಗ್ರಾಮಗಳವರಿಗಿಂತಲೂ, ಸ್ವಲ್ಪ ಜಾಸ್ತಿ ಕನ್‌ಸೆಷ್ಟ್ ತೋರಿಸುತ್ತಾರೆ. ನೀವು ಹೇಳಿದ್ದು ಅಷ್ಟು ಬೇಗ ಆಗುವುದಿಲ್ಲ ಅದು ಖಾಯಂಗುತ್ತ ಅಬಾಲಿಷನ್ ಕಾನೂನು ಪ್ರಕಾರ ಆಗಬೇಕು, ಕೌಂಟರ್ ಕ್ಲೇಮ್ಸ್ ಬರುತ್ತವೆ. ಒಂದೊಂದು ಭೂಮಿಗೂ ಇದನ್ನು ಮಾಡಬೇಕಾದರೆ ನಿಧಾನವಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಮ್ಯುಜೇಷನ್ ಸೌಲಭ್ಯಗಳನ್ನು ತಾಲ್ಲೂಕು ಆಫೀಸಿನಲ್ಲಿ ಕೊಡದಿರುವುದಕ್ಕೆ ಕಾರಣ ಅಲ್ಲಿಯ ತಹಸೀಲುದಾರರುಗಳು ಸರಿಯಾಗಿ ಕೆಲಸ ಮಾಡದಿದ್ದುದು ಅಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಕೊಡಲಲ್ಲ ಅನ್ನುವುದು ಈಗ ಗಮನಕ್ಕೆ ಬಂದಿರುವುದು ಏನೇನು ತೊಂದರೆಯಿದೆಯೋ, ಅದನ್ನು ಹೋಗರಾಡಿಸಲು ಕ್ರಮ ತೆಗೆದುಕೊಂಡು, ಬೇಗ ಆಗುವಂತೆ ಮಾಡುತ್ತೇವೆ.